

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಇಂದಿಗೂ ಮುಗಿಯದ ಹೆಣ್ಣಿನ ಗೋಳು

**ಸ್ವಾ**ತಂತ್ರ್ಯೋತ್ತರ ಭಾರತದ ಬೌದ್ಧಿಕ ವಲಯದಲ್ಲಿ, ಮಹಿಳೆಯರನ್ನು ಕುರಿತು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಮನುಸ್ಮೃತಿಯು ವಿಧಿಸಿದ ಕಟ್ಟುಪಾಡು ಪದೇ ಪದೇ ಚರ್ಚೆಗೆ ಗ್ರಾಸವಾಗಿದೆ. ಅದರ ಪೂರ್ಣ ಪಾಠ ಹೀಗಿದೆ:

**ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ।**
**ಪುತ್ರಸ್ತು ಸ್ಥವಿರೇ ತಸ್ಮಾತ್ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ॥ (9.3)**

ಅಂದರೆ ಹೆಣ್ಣನ್ನು ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ, ಯೌವನದಲ್ಲಿ ಗಂಡನು ರಕ್ಷಿಸುತ್ತಾನೆ, ವೃದ್ಧಾಪ್ಯದಲ್ಲಿ ಮಗನು ರಕ್ಷಿಸುತ್ತಾನೆ. ಆದ್ದರಿಂದ ಸ್ತ್ರೀಯು 'ಸ್ವಾತಂತ್ರ್ಯ'ಕ್ಕೆ ಅರ್ಹಳಲ್ಲ. ಹೀಗೆ ಹೆಣ್ಣಿಗೆ ಸ್ವಾತಂತ್ರ್ಯ ಕೊಟ್ಟಿಲ್ಲವೆಂದು ಮನುವನ್ನು ವೈಚಾರಿಕ ಕಟಕಟೆಯಲ್ಲಿ ನಿಲ್ಲಿಸಿ ಬಹಳಷ್ಟು ಜನರು ಆಕ್ರೋಶ ವ್ಯಕ್ತಪಡಿಸುತ್ತಾರೆ. ಮಹಿಳಾ ಬುದ್ಧಿಜೀವಿಗಳಂತೂ "ಮನುವನ್ನು ಗಲ್ಲಿಗೆ ಹಾಕಬೇಕು" ಎಂದು ಫರ್ಮಾನು ಹೊರಡಿಸಿಬಿಡುತ್ತಾರೆ! 'ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ಎಂಬ ಮೇಲ್ಕಂಡ ಮಾತು ಮನುಸ್ಮೃತಿಯ 9ನೆಯ ಅಧ್ಯಾಯದ ಆರಂಭದಲ್ಲಿ ಬರುತ್ತದೆ. ಇದು ಸ್ತ್ರೀಪುರುಷ ಸಮಾನತೆ ಇಲ್ಲದ ಕಾಲದಲ್ಲಿ ಹೇಳಿದ ಮಾತು. ಇದಕ್ಕಿಂತಲೂ ಹೆಚ್ಚು ಆಕ್ಷೇಪಾರ್ಹವಾದ ಮಾತು ಇದರ ಹಿಂದಿನ ಶ್ಲೋಕದಲ್ಲಿದೆ:

**ಅಸ್ವತಂತ್ರಾಃ ಸ್ತ್ರಿಯಃ ಕಾರ್ಯಾಃ ಪುರುಷೈಃ ಸ್ವೈರ್ದಿವಾನಿಶಂ।**
**ವಿಷಯೇಷು ಚ ಸಜ್ಜಂತ್ಯಃ ಸಂಸ್ಥಾಪ್ಯಾ ಆತ್ಮನೋ ವಶೇ॥ (9.2)**

ಅಂದರೆ ಹಗಲಿರುಳೂ ಪುರುಷರು ಸ್ತ್ರೀಯರನ್ನು ಸ್ವತಂತ್ರವಾಗಿ ಇರಲು ಬಿಡಬಾರದು, ಭೋಗವಿಲಾಸಗಳಲ್ಲಿ ತೊಡಗುವ ಅವರನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಬೇಕು ಎಂದರ್ಥ. ಮನುಸ್ಮೃತಿಯ ಈ ಕರಾಳ ಶಾಸನ ಇಂದು ಎಷ್ಟೇ ಕಟು ಟೀಕೆಗೆ ಒಳಗಾಗಿದ್ದರೂ ಸಮಕಾಲೀನ ಸಂದರ್ಭದಲ್ಲಿ ಭಾರತೀಯರ ಮನೋಧರ್ಮ ಇದಕ್ಕಿಂತ ವಿಭಿನ್ನವಾಗಿಲ್ಲವೆಂಬುದನ್ನು ಈಗಲೂ ಜನರಾಡುವ ಮಾತಿನಲ್ಲಿ ಮನಗಾಣಬಹುದು. "ಮಗಳನ್ನು ಕಟ್ಟುನಿಟ್ಟಾಗಿ ಬೆಳೆಸಿದ್ದರೆ ಅವಳ್ಯಾಕೆ ಅವನೊಂದಿಗೆ ಓಡಿಹೋಗುತ್ತಿದ್ದಳು", "ಹೆಂಡತಿಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳದೇ ಇರುವ ಅವನೊಬ್ಬ ಗಂಡಸಾ?", "ತಂದೆ-ತಾಯಿಗಳಿಗೆ ಅನ್ನ ಹಾಕದೇ ಇರುವವನು ಅವನೆಂಥಾ ಮಗ?" ಇತ್ಯಾದಿ ಮೂದಲಿಕೆಯ ಮಾತುಗಳು ಈಗಲೂ ಕೇಳಿಬರುತ್ತವೆ. ಮನುಸ್ಮೃತಿಯು ಹೀಗೆ ಜನರ ಮನಸ್ಸನ್ನು ರೂಪಿಸಿತು ಎನ್ನುವುದಕ್ಕಿಂತ ಜನರ ಮನೋಧರ್ಮವೇ ಮನುಶಾಸನವಾಯಿತು ಎಂದು ಹೇಳುವುದು ಹೆಚ್ಚು ಸಮಂಜಸವಾದೀತು. ಮನುವು ಸಮಾಜದ ಓರೆಕೋರೆಗಳನ್ನು ತಿದ್ದಲು ಹೊರಟ ಸಾಮಾಜಿಕ ಪರಿವರ್ತನೆಯ ಹರಿಕಾರನಲ್ಲ (social reformer), ಅಂದಿನ ಸಮಾಜದ ರೀತಿರಿವಾಜುಗಳನ್ನು ಕಟ್ಟಳೆಗಳಾಗಿ ರೂಪಿಸಿದ ಧರ್ಮಶಾಸ್ತ್ರಜ್ಞ (Lawmaker).

ಮನುಸ್ಮೃತಿಯಲ್ಲಿ ಬಳಸಿರುವ 'ಸ್ವಾತಂತ್ರ್ಯ' ಎಂಬ ಶಬ್ದ ಇಂದಿನ ಪ್ರಜಾಪ್ರಭುತ್ವದಲ್ಲಿ ಬಳಕೆಯಲ್ಲಿರುವ ಮೂಲಭೂತ ಹಕ್ಕುಗಳನ್ನೊಳಗೊಂಡ 'ಸ್ವಾತಂತ್ರ್ಯ' ಖಂಡಿತಾ ಅಲ್ಲ. ಮನುವಿನ ಕಾಲದಲ್ಲಿ ಪ್ರಜಾಪ್ರಭುತ್ವವೆಲ್ಲಿತ್ತು? ಆ ಕಾಲದಲ್ಲಿ ಇಂದಿನ ಪ್ರಜಾಪ್ರಭುತ್ವದಲ್ಲಿರುವ ಸ್ವಾತಂತ್ರ್ಯ ಹೆಣ್ಣಿಗೂ ಇರಲಿಲ್ಲ, ಗಂಡಿಗೂ ಇರಲಿಲ್ಲ. ಆಗ ಇದ್ದದ್ದು ಪ್ರಜಾಪ್ರಭುತ್ವವಲ್ಲ; ರಾಜಪ್ರಭುತ್ವ. ಅಲ್ಲಿ ಪ್ರಜೆಗಳಿಗೆ ಇಂದಿನಂತೆ ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳು ಇರಲೇ ಇಲ್ಲ! ಆಗ 'ಸ್ವಾತಂತ್ರ್ಯ' ಎಂದರೆ ಯಾರ ಆಸರೆಯೂ ಇಲ್ಲದೆ, ಯಾರ ಅಂಕೆಗೂ ಒಳಪಡದೆ ಒಂಟಿಯಾಗಿ ಜೀವಿಸುವುದು ಎಂದರ್ಥ. ಈಗಲೂ ಸ್ವತಂತ್ರವಾಗಿ ನೆಮ್ಮದಿಯಿಂದ ಬದುಕುವ ಮುಕ್ತ ಅವಕಾಶ ಹೆಣ್ಣಿಗಿಲ್ಲ. 'ಹೆಣ್ಣುಮಕ್ಕಳು ರಾತ್ರಿಹೊತ್ತಿನಲ್ಲಿ ಒಬ್ಬಂಟಿಗಳಾಗಿ ಹೊರಗೆ ಹೋಗುವುದು ಸುರಕ್ಷಿತವಲ್ಲ' ಎಂದು ಈಗಲೂ ಹೇಳುವುದನ್ನು ನೀವು ಕೇಳಿದ್ದೀರಿ. ಈ ಅಸುರಕ್ಷಿತ ಭಾವನೆಯ ಸಾಮಾಜಿಕ ವಿಷಮ ವಾತಾವರಣವೇ 'ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ಎಂಬ ಮನುಶಾಸನದ ಮಾತಿನ ಹಿಂದಿರುವ ಆಶಯ.

ಸಮಾಜವು ಒಂದು ಹೆಣ್ಣನ್ನು ಕುಟುಂಬದ ಸದಸ್ಯಳಾಗಿ ಒಟ್ಟಿಗೆ ಇದ್ದಾಗ ನೋಡುವ ದೃಷ್ಟಿಯೇ ಬೇರೆ, ಕುಟುಂಬದಿಂದ ಬೇರ್ಪಟ್ಟು ಒಂಟಿ ಜೀವನ ನಡೆಸುವಾಗ ನೋಡುವ ದೃಷ್ಟಿಯೇ ಬೇರೆ. ಸಮಾಜದ ದುಷ್ಟಶಕ್ತಿಗಳು ಅವಳೊಂದಿಗೆ ಕೆಟ್ಟದಾಗಿ ವರ್ತಿಸದಂತೆ ನೋಡಿಕೊಳ್ಳುವುದು ಕುಟುಂಬದ ಇತರ ಸದಸ್ಯರಾದ ತಂದೆ, ಗಂಡ, ಮಕ್ಕಳು ಮತ್ತು ಭಾವಮೈದುನರ ಹೊಣೆಗಾರಿಕೆ ಎಂದು ಮನುಸ್ಮೃತಿ ಎಚ್ಚರಿಸಿದೆಯೇ ಹೊರತು ಹೆಣ್ಣಿನ ಮೇಲಿನ ಅನಾದರಣೆಯಿಂದ ಅಲ್ಲ. ಅಷ್ಟೇ ಅಲ್ಲ ಕುಟುಂಬದ ಒಳಗೂ ಆಕೆಗೆ ಯಾವುದೇ ರೀತಿಯ ಮಾನಸಿಕ ಹಿಂಸೆಯುಂಟಾಗದಂತೆ, ಆಕೆ ದುಃಖಿಸದಂತೆ, ಸದಾ ಕಾಲ ಸಂತೋಷದಿಂದ ಇರುವಂತೆ ನೋಡಿಕೊಳ್ಳಬೇಕೆಂದೂ ಎಚ್ಚರಿಸುತ್ತದೆ. ಉದಾಹರಣೆಗೆ ಮನುಸ್ಮೃತಿಯ 3ನೆಯ ಅಧ್ಯಾಯದಲ್ಲಿ ಬರುವ ಈ ಕೆಳಕಂಡ ಶ್ಲೋಕಗಳನ್ನು ಗಮನಿಸಿ:

**ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ।**
**ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ॥ (3.55)**

ಹೆಚ್ಚಿನ ಕೌಟುಂಬಿಕ ಸುಖ-ಸಂತೋಷ ಬಯಸುವ ತಂದೆ-ತಾಯಂದಿರು, ಅಣ್ಣ-ತಮ್ಮಂದಿರು, ಗಂಡಂದಿರು, ಭಾವಮೈದುನರು ಹೆಣ್ಣುಮಕ್ಕಳಿಗೆ ಉಡುಗೊರೆಗಳನ್ನು ಕೊಟ್ಟು ಗೌರವಿಸಬೇಕು.

**ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಂ।**
**ನ ಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ॥ (3.57)**

**ಜಾಮಯೋ ಯಾನಿ ಗೇಹಾನಿ ಶಪಂತ್ಯಪ್ರತಿಪೂಜಿತಾಃ।**
**ತಾನಿ ಕೃತ್ಯಾಹತಾನೀವ ವಿನಶ್ಯಂತಿ ಸಮಂತತಃ॥ (3.58)**

ಯಾವ ಮನೆಯಲ್ಲಿ ಮಹಿಳೆಯರು ದುಃಖಿಸುತ್ತಾರೋ, ನೋವಿನಿಂದ ನರಳಿ ಶಪಿಸುತ್ತಾರೋ ಆ ಮನೆತನವು ಹಾಳಾಗಿ ಹೋಗುತ್ತದೆ. ಯಾವ ಮನೆಯಲ್ಲಿ ಮಹಿಳೆಯರು ಸಂತೋಷದಿಂದ ಇರುತ್ತಾರೋ ಆ ಮನೆತನವು ಸರ್ವದಾ ಅಭ್ಯುದಯವನ್ನು ಹೊಂದುತ್ತದೆ.

ಈಗ ಕಾಲ ಬದಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರಕಿದೆ. ಭಾರತೀಯ ನಾರಿ ಈಗ ಪುರುಷನಿಗೆ ಸಮಾನಳು. ಹೆಣ್ಣು-ಗಂಡು ಸರಿಸಮಾನರೆಂದು ತಾತ್ವಿಕವಾಗಿ ಒಪ್ಪಿಕೊಂಡಿರುವ ಅಂಶ. ಯಾವ ಮನುವಿನ ಹಂಗೂ ಇಲ್ಲ, ಸಂವಿಧಾನವೇ ಅವಳಿಗೆ ರಕ್ಷಣೆಯನ್ನು ನೀಡಿದೆ. ಒಬ್ಬ ಮಹಿಳೆ ಭಾರತದ ಪ್ರಧಾನ ಮಂತ್ರಿಯಾಗಿ ಶೋಭಿಸಿದರೆ ಮತ್ತೊಬ್ಬ ಮಹಿಳೆ ರಾಷ್ಟ್ರಪತಿಯಾಗಿ ಭಾರತದ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಆದರೂ ಸಾಮಾನ್ಯ ಮಹಿಳೆಯ ಸ್ಥಿತಿಗತಿಗಳಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಏನೂ ಆಗಿಲ್ಲ. ಅವಳ ಸ್ಥಿತಿ ಇಂದಿಗೂ ಹಾಗೆಯೇ ಇದೆ. ಹಿಂದಿನ ಕಾಲದ ಅಸುರಕ್ಷಿತ ಹೆಣ್ಣಿಗೆ ದೊರೆಯುತ್ತಿದ್ದ ಮನುಪ್ರಣೀತವಾದ ರಕ್ಷಣೆಯೂ ಅವಳಿಗೆ ಈಗ ದೊರೆಯುತ್ತಿಲ್ಲ. ವಿವಾಹಿತ ಹೆಣ್ಣನ್ನು ನೋಡುವ ದೃಷ್ಟಿಯೇ ಬೇರೆ, ಅವಿವಾಹಿತ ಹೆಣ್ಣನ್ನು ನೋಡುವ ದೃಷ್ಟಿಯೇ ಬೇರೆ. ಬೀದಿ ಕಾಮಣ್ಣಗಳ ಕಾಕದೃಷ್ಟಿಯಿಂದ ಪಾರಾಗಲು ನಗರಪ್ರದೇಶದ ಅವಿವಾಹಿತ ಮಹಿಳೆಯರನೇಕರು ತಾಳಿ ಧರಿಸಿ ಕೆಲಸಕ್ಕೆ ಹೋಗುತ್ತಾರೆಂದರೆ ಸಮಸ್ಯೆಯ ಭೀಕರತೆ ಅರ್ಥವಾದೀತು. ಕಾನೂನುಗಳು ಬಹುತೇಕ ಮಹಿಳೆಯರ ನೆರವಿಗೆ ಬಾರದ ಕಾಗದದ ಹುಲಿಗಳಾಗಿವೆ. ಎಷ್ಟೋ ಜನ ಮಹಿಳೆಯರು ತಮ್ಮದಲ್ಲದ ತಪ್ಪಿಗೆ ಹೆಣ್ಣಾಗಿ ಹುಟ್ಟಿದ್ದೇ ತಪ್ಪು ಎಂದು ಪರಿತಪಿಸುವಂತಾಗಿದೆ. ಕಣ್ಣೀರ ಕೋಳನ್ನು ತಿನ್ನುತ್ತಾ ಕರುಳ ಕುಡಿಗಳನ್ನು ಸಾಕುತ್ತಿದ್ದಾರೆ. ಇತ್ತ ಸಾಯಲೂ ಆಗದ ಅತ್ತ ಬದುಕಲೂ ಆಗದ ಬವಣೆಯನ್ನು ಅನುಭವಿಸುತ್ತಿದ್ದಾರೆ.

ಸಹೃದಯ ಓದುಗರೇ! "ಒಬ್ಬ ಹೆಣ್ಣು ಮಧ್ಯರಾತ್ರಿಯಲ್ಲಿ ಸ್ವತಂತ್ರವಾಗಿ ಓಡಾಡುವಂತೆ ಆಗದ ಹೊರತು ನಾವು ಪಡೆದ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ" ಎಂದು ಗಾಂಧೀಜಿ ಹೇಳುತ್ತಿದ್ದರು. ಅಂತಹ ಸ್ವಾತಂತ್ರ್ಯ ಭಾರತೀಯ ಮಹಿಳೆಯರಿಗೆ ಸ್ವತಂತ್ರಭಾರತದಲ್ಲಿ ಸಿಕ್ಕಿದೆಯೇ? ಇಲ್ಲವೆಂದರೆ ಯಾವಾಗ ಸಿಕ್ಕೀತು?

**29.11.2012**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**